## ಕರ್ನಾಟಕ ಸರ್ಕಾರ

ಮುಖ್ಯ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ,
ಬೆಂಗಳೂರು-560 009.

ಸಂ. ಮುಇಂ/ಪಂರಾಇಂಇ/ಬೆಂ/ಸಿ-8/ಕಿಇಂ ನೇರ ನೇಮಕಾತಿ/2014-15/289 ದಿನಾಂಕ 28/04/2015

## ಅಧಿಸೂಚನೆ

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಇಂಜಿನಿಯರ್ (ಸಿವಿಲ್) ಮತ್ತು ಕಿರಿಯ ಇಂಜಿನಿಯರ್ (ಎನ್ವಿರಾನ್ಮೆಂಟಲ್) ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧದಲ್ಲಿನ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ / ಹೆಚ್ಚುವರಿ ಆಯ್ಕೆಪಟ್ಟಿ ಪ್ರಕಟಿಸುವ ಬಗ್ಗೆ

ಉಲ್ಲೇಖ:
1) ಸರ್ಕಾರದ ಪತ್ರ ಸಂ. ಗ್ರಾಅಪ/177/ಸೇಶಿಕಾ/2014(ಭಾಗ) ದಿನಾಂಕ 6/1/2015
2) ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ/177/ಸೇಶಿಕಾ/2014 ದಿನಾಂಕ 1/12/2014
3) ಈ ಕಛೇರಿ ಅಧಿಸೂಚನೆ ಸಂ. ಮುಇಂ/ಪಂರಾಇಂಇ/ಬೆಂ/ಸಿ-8/ಕಿಇಂ.ನೇರ ನೇಮಕಾತಿ/2014-15/8174 ದಿನಾಂಕ 6/1/2015
4) ಈ ಕಛೇರಿ ಅಧಿಸೂಚನೆ ಸಂ. ಮುಇಂ/ಪಂರಾಇಂಇ/ಬೆಂ/ಸಿ-8/ಕಿ.ಇಂ.ನೇರ ನೇಮಕಾತಿ/2014-15/13371 ದಿನಾಂಕ 20/3/2015

-* -

ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ (ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ವೃಂದಗಳಿಗೆ ನೇಮಕಾತಿ)(ವಿಶೇಷ) ನಿಯಮಗಳು, 2014ರಂತೆ ಈ ಇಲಾಖೆಯಲ್ಲಿ ಖಾಲಿ ಇರುವ 472 ಗ್ರೂಪ್-ಸಿ ದರ್ಜೆಯ ರೂ.17650-32000 ವೇತನ ಶ್ರೇಣಿಯುಳ್ಳ ಕಿರಿಯ ಇಂಜಿನಿಯರ್(ಸಿವಿಲ್) ಮತ್ತು ಕಿರಿಯ ಇಂಜಿನಿಯರ್(ಎನ್ವಿರಾನ್ಮೆಂಟಲ್) ಹುದ್ದೆಗಳಿಗೆ ಭರ್ತಿ ಮಾಡುವ ಸಲುವಾಗಿ ಉಲ್ಲೇಖ-3ರ ದಿನಾಂಕ 6/1/2015ರ ಅಧಿಸೂಚನೆಯಲ್ಲಿ ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಕೆಳಕಂಡಂತೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು.

| ಕ್ರ.ಸಂ. | ಹುದ್ದೆಗಳ ವಿವರ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|
| 1 | ಕಿರಿಯ ಇಂಜಿನಿಯರ್(ಸಿವಿಲ್) | 276 |
| 2 | ಕಿರಿಯ ಇಂಜಿನಿಯರ್(ಸಿವಿಲ್) (ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು) | 166 |
| 3 | ಕಿರಿಯ ಇಂಜಿನಿಯರ್(ಎನ್ವಿರಾನ್ಮೆಂಟಲ್) | 30 |
| | **ಒಟ್ಟು** | **472** |

ಕಿರಿಯ ಇಂಜಿನಿಯರ್ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಸರಾಸರಿ ಶೇಕಡಾವಾರು ಅಂಕಗಳ ಆಧಾರದ ಮೇಲೆ ಜೇಷ್ಠತೆಯನುಸಾರ ಹುದ್ದೆಗಳ ಸಂಖ್ಯೆಗೆ ಸೀಮಿತವಾಗಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳಿಗೆ ಒಳಪಟ್ಟು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಆಯ್ಕೆ ಸಲುವಾಗಿ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ ಹಾಗೂ ಶೇ.25% ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು 1 ರಿಂದ 12ರವರೆಗಿನ ಅನುಬಂಧದಲ್ಲಿ ತಯಾರಿಸಿ

ಉಲ್ಲೇಖ(4)ರ ದಿನಾಂಕ 20/3/2015ರ ಈ ಕಛೇರಿ ಅಧಿಸೂಚನೆಯಲ್ಲಿ ಆಕ್ಷೇಪಣೆ ಕೋರಿ ಅಭ್ಯರ್ಥಿಗಳಿಗೆ / ಸಾರ್ವಜನಿಕರಿಗೆ ಲಭ್ಯವಾಗುವಂತೆ ಕರ್ನಾಟಕ ರಾಜ್ಯಪತ್ರ, ಕಛೇರಿ ಸೂಚನಾ ಫಲಕ ಹಾಗೂ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ಈ ಸಂಬಂಧ ನಿಗದಿಪಡಿಸಿದ ಅವಧಿಯೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆ ಹಾಗೂ ಸಲಹೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಅಂತಿಮಗೊಳಿಸಿದೆ.

ಮೇಲೆ ತಿಳಿಸಿರುವ (ವಿಶೇಷ) ನಿಯಮಗಳು 2014ರ ಉಪನಿಯಮ (1), (2), (3) ಹಾಗೂ (4)ರಂತೆ ಕಿರಿಯ ಇಂಜಿನಿಯರ್ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಸರಾಸರಿ ಶೇಕಡಾವಾರು ಅಂಕಗಳ ಆಧಾರದ ಮೇಲೆ ಜೇಷ್ಠತೆಯನುಸಾರ ಹುದ್ದೆಗಳ ಸಂಖ್ಯೆಗೆ ಸೀಮಿತವಾಗಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳಿಗೆ ಒಳಪಟ್ಟು ಮೀಸಲಾತಿ ಪ್ರವರ್ಗವಾರು (Reservation Categorywise) ಹಾಗೂ ಮೆರಿಟ್ ಆಧಾರಿತ ಅಭ್ಯರ್ಥಿಗಳ ಮುಖ್ಯ ಅಂತಿಮ ಆಯ್ಕೆ ಪಟ್ಟಿ (Final Selection List) ಮತ್ತು ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಗಳ ಶೇಕಡಾ 25ರಷ್ಟು ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು (Additional Selection List) (ಮುಖ್ಯ ಅಂತಿಮ ಆಯ್ಕೆಪಟ್ಟಿಯಲ್ಲಿ ಪ್ರಕಟಿಸಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ) (ಮೊದಲ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ) ತಯಾರಿಸಿ ಕೆಳಕಂಡಂತೆ 1 ರಿಂದ 12ರವರೆಗಿನ ಅನುಬಂಧದಲ್ಲಿ ಅಭ್ಯರ್ಥಿಗಳಿಗೆ / ಸಾರ್ವಜನಿಕರಿಗೆ ಲಭ್ಯವಾಗುವಂತೆ ಅಧಿಕೃತ ಕರ್ನಾಟಕ ರಾಜ್ಯಪತ್ರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮುಖ್ಯ ಇಂಜಿನಿಯರ್ ಕಛೇರಿಯ ಸೂಚನಾ ಫಲಕ ಹಾಗೂ ಇಲಾಖೆಯ ಅಧಿಕೃತ ವೆಬ್‌ಸೈಟ್ http://rdpr.kar.nic.in ರಲ್ಲಿ ಸದರಿ ಅಧಿಸೂಚನೆಯ ಜೊತೆ ಲಗತ್ತಿಸಿ ಪ್ರಕಟಿಸಲಾಗಿದೆ.

| I | ಕ್ರ. ಸಂ. | ಹುದ್ದೆಗಳ ವಿವರ | ಪ್ರಕಟಿಸಿರುವ ಅನುಬಂಧಗಳು (Annexures) |
|---|---|---|---|
| | 1 | ಕಿರಿಯ ಇಂಜಿನಿಯರ್ (ಸಿವಿಲ್) – 275 ಹುದ್ದೆಗಳಿಗೆ ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿ (Reservation Categorywise Final Selection List of Junior Engineer-Civil) | ಅನುಬಂಧ–1ರಲ್ಲಿ (Annexutre-1) |
| | 2 | ಕಿರಿಯ ಇಂಜಿನಿಯರ್ (ಸಿವಿಲ್) – 275 ಹುದ್ದೆಗಳಿಗೆ ಮೀಸಲಾತಿ ಪ್ರವರ್ಗವಾರು ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿ (Merit based Final Selection List of Junior Engineer-Civil) | ಅನುಬಂಧ–2ರಲ್ಲಿ (Annexutre-2) |
| | 3 | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು (ಮುಖ್ಯ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (Reservation Categorywise 25% Additional Selection List of Junior Engineer-Civil) | ಅನುಬಂಧ–3ರಲ್ಲಿ (Annexutre-3) |

| | | | |
|---|---|---|---|
| | 4 | ಪ್ರವರ್ಗವಾರು ಆಯ್ಕೆ ಮಾಡಿರುವ ಶೇಕಡಾ 25ರಷ್ಟು ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಹೆಚ್ಚುವರಿ ಆಯ್ಕೆ ಪಟ್ಟಿ (25% Merit based Additional Selection List of Junior Engineer (Civil)) | ಅನುಬಂಧ–4ರಲ್ಲಿ (Annexutre-4) |
| II | 1 | ಕಿರಿಯ ಇಂಜಿನಿಯರ್ (ಸಿವಿಲ್) – 163 ಹುದ್ದೆಗಳಿಗೆ (ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು), ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ (Reservation Categorywise Final Selection List of Junior Engineer (Civil) (HKR)) | ಅನುಬಂಧ–5ರಲ್ಲಿ (Annexutre-5) |
| | 2 | ಕಿರಿಯ ಇಂಜಿನಿಯರ್ (ಸಿವಿಲ್) – 163 ಹುದ್ದೆಗಳಿಗೆ (ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು), ಮೀಸಲಾತಿ ಪ್ರವರ್ಗವಾರು ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ (Merit based Final Selection List of Junior Engineer-(Civil)(HKR)) | ಅನುಬಂಧ–6ರಲ್ಲಿ (Annexutre-6) |
| | 3 | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು (ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (Reservation Categorywise 25% Additional Selection List of Junior Engineer (Civil)(HKR) | ಅನುಬಂಧ–7ರಲ್ಲಿ (Annexutre-7) |
| | 4 | ಪ್ರವರ್ಗವಾರು ಆಯ್ಕೆ ಮಾಡಿರುವ ಶೇಕಡಾ 25ರಷ್ಟು ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (25% Merit based Additional Selection List of Junior Engineer (Civil)(HKR)) | ಅನುಬಂಧ–8ರಲ್ಲಿ (Annexutre-8) |
| III | 1 | ಕಿರಿಯ ಇಂಜಿನಿಯರ್ (ಎನ್ವಿರಾನ್ಮೆಂಟಲ್) – 27 ಹುದ್ದೆಗಳಿಗೆ ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ (Reservation Categorywise Final Selection List of Junior Engineer(Environmental) | ಅನುಬಂಧ–9ರಲ್ಲಿ (Annexutre-9) |
| | 2 | ಕಿರಿಯ ಇಂಜಿನಿಯರ್ (ಎನ್ವಿರಾನ್ಮೆಂಟಲ್) – 27 ಹುದ್ದೆಗಳಿಗೆ ಮೀಸಲಾತಿ ಪ್ರವರ್ಗವಾರು ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ (Merit based Final Selection List of Junior Engineer-Environmental) | ಅನುಬಂಧ–10ರಲ್ಲಿ (Annexutre-10) |
| | 3 | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು (ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (Reservation Categorywise 25% Additional Selection List of Junior Engineer (Environmental) | ಅನುಬಂಧ–11ರಲ್ಲಿ (Annexutre-11) |
| | 4 | ಪ್ರವರ್ಗವಾರು ಆಯ್ಕೆ ಮಾಡಿರುವ ಶೇಕಡಾ 25 ರಷ್ಟು ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಹೆಚ್ಚುವರಿ ಆಯ್ಕೆ ಪಟ್ಟಿ (25% Merit based Additional Selection List of Junior Engineer (Environmental) | ಅನುಬಂಧ–12ರಲ್ಲಿ (Annexutre-12) |

ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ ಕಿರಿಯ ಇಂಜಿನಿಯರ್ (ಸಿವಿಲ್) – 276 ಹುದ್ದೆಗಳಲ್ಲಿ ST ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆಗೆ ಕಿರಿಯ ಇಂಜಿನಿಯರ್ (ಸಿವಿಲ್) – 166 (ಹೈದ್ರಾಬಾದ್–ಕರ್ನಾಟಕ ಪ್ರದೇಶ ಸ್ಥಳೀಯರಿಗೆ ಮೀಸಲಿರಿಸಿರುವ) ಹುದ್ದೆಗಳಲ್ಲಿ SC ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ, Cat–1ರ ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ, 3ಎ ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ ಸೇರಿದಂತೆ ಒಟ್ಟು 3 ಹುದ್ದೆಗಳಿಗೆ ಹಾಗೂ ಕಿರಿಯ ಇಂಜಿನಿಯರ್ (ಎನ್ವಿರಾನ್ಮೆಂಟಲ್) – 30 ಹುದ್ದೆಗಳಲ್ಲಿ ಸಾಮಾನ್ಯ ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ, SC ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ, 2ಎ ಪ್ರವರ್ಗದ ಅಂಗವಿಕಲ (HI/LD or CP/LC) ಗುಂಪಿನ – 1 ಹುದ್ದೆ ಸೇರಿದಂತೆ ಒಟ್ಟು 3 ಹುದ್ದೆಗಳಿಗೆ ಅಂಗವಿಕಲ ಗುಂಪಿನ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ, ಈ ಪ್ರವರ್ಗಗಳ ಅಂಗವಿಕಲ ಗುಂಪಿನ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಮುಂದಿನ ನೇಮಕಾತಿ ಸಂದರ್ಭದಲ್ಲಿ ತುಂಬಲು ವಿಶೇಷ ನೇರ ನೇಮಕಾತಿ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿ ಪ್ರಕಟಿಸಿರುವ ಮುಖ್ಯ ಅಂತಿಮ ಆಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರು ಸೇರ್ಪಡೆಯಾದ ಮಾತ್ರಕ್ಕೆ ನೇಮಕಾತಿಗಾಗಿ ಯಾವುದೇ ಹಕ್ಕು ಪ್ರಧಾನವಾಗತಕ್ಕದ್ದಲ್ಲ ಎಂದು ಅಭ್ಯರ್ಥಿಗಳು ತಿಳಿಯತಕ್ಕದ್ದು.

ಸಹಿ/–
ಅಧ್ಯಕ್ಷರು,
ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.

1. ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರತಿಯನ್ನು ಸದಸ್ಯ ಕಾರ್ಯದರ್ಶಿ, ವಿಶೇಷ ನೇಮಕಾತಿ ಸಮಿತಿ ಹಾಗೂ ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಡತಕ್ಕೆ

ಅಧ್ಯಕ್ಷರು,
ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.

ಅಧ್ಯಕ್ಷರು,
ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ಆಯುಕ್ತರು, ಹಿಂದುಳಿದ ವರ್ಗಗಳು ಮತ್ತು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ನಿರ್ದೇಶಕರು, ವಿಕಲ ಚೇತನ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

ಸದಸ್ಯ ಕಾರ್ಯದರ್ಶಿ,
ವಿಶೇಷ ನೇಮಕಾತಿ ಸಮಿತಿ ಹಾಗೂ ಅಧೀಕ್ಷಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.